ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ 06 ವರ್ಗಾವಣೆ 2018-19 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:29-08-2018

## ಸುತ್ತೋಲೆ

ವಿಷಯ: 2018-19ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕ/ ಗ್ರಂಥಪಾಲಕರು/ ದೈಹಿಕ ಶಿಕ್ಷಣ ಶಿಕ್ಷಕರು/ಬೋಧಕೇತರ ಸಿಬ್ಬಂದಿ ವರ್ಗಾವಣೆ ಬಗ್ಗೆ.

ಉಲ್ಲೇಖ:
1. ದಿನಾಂಕ:16.08.2018ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಗಳು.
2. ಈ ಕಛೇರಿ ದಿನಾಂಕ:01.08.2018ರ ಸಮಸಂಖ್ಯೆಯ ಸುತ್ತೋಲೆ

*****

2018-19ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮೋದನೆ ಪಡೆದಿರುವ ಪ್ರಕಾರ ವರ್ಗಾವಣೆ ಪ್ರಕ್ರಿಯೆಯನ್ನು ಈ ಕೆಳಗೆ ವಿವರಿಸಲಾಗಿರುವಂತೆ ಕೈಗೊಳ್ಳಲಾಗುವುದು.

1. ಇಲಾಖೆಯಡಿಯಲ್ಲಿಯ ಕಾಲೇಜು/ಕಛೇರಿಗಳನ್ನು ವರ್ಗಾವಣೆ ಅಧಿನಿಯಮದನುಸಾರವಾಗಿ ಎ, ಬಿ, ಸಿ ವಲಯಗಳಲ್ಲಿ ವಿಂಗಡಿಸಲಾಗಿರುತ್ತದೆ. ಅಧಿನಿಯಮದನುಸಾರವಾಗಿ ಮಂಜೂರಾಗಿರುವ ವೃಂದ ಬಲದ ಗರಿಷ್ಠ 8% ರಷ್ಟು ವರ್ಗಾವಣೆಗಳನ್ನು ಮಾಡಬಹುದಾಗಿರುತ್ತದೆ. ವರ್ಗಾವಣೆ ಅಧಿನಿಯಮದನುಸಾರವಾಗಿ 4% ಸಾಮಾನ್ಯ (ಕಡ್ಡಾಯ) ವರ್ಗಾವಣೆ ಹಾಗೂ 4% ವಿಶೇಷ ಪ್ರಕರಣಗಳ ವರ್ಗಾವಣೆಗಳನ್ನು ಮಾಡಲಾಗುವುದು. ಆ ಪ್ರಕಾರವಾಗಿ, ಸದರಿ ವಲಯಗಳಲ್ಲಿ ಮಂಜೂರಾದ ಹುದ್ದೆಗಳ ಶೇ.4 ರಷ್ಟು ಪ್ರಮಾಣದ ಸಿಬ್ಬಂದಿಗಳನ್ನು ಆಯಾ ವಲಯದಲ್ಲಿ ಸಲ್ಲಿಸಿರುವ ಸತತ ಸೇವೆಯ ಜೇಷ್ಠತೆಯ ಆಧಾರದ ಮೇಲೆ ಕಡ್ಡಾಯವಾಗಿ ವರ್ಗಾಯಿಸಲು ಕ್ರಮಕೈಗೊಂಡು ಇದರಿಂದ ಖಾಲಿಯಾಗುವ ಹುದ್ದೆಗಳನ್ನು ಹಾಗೂ ಈಗಾಗಲೇ ಖಾಲಿಯಿರುವ (ಕಲಾ,ವಾಣಿಜ್ಯ ವಿಷಯಗಳಲ್ಲಿ ಕನಿಷ್ಟ 12 ತಾಸುಗಳು ಹಾಗೂ ಪ್ರಾಯೋಗಿಕ ತರಗತಿಗಳನ್ನೊಳಗೊಂಡ ವಿಷಯಗಳಲ್ಲಿ ಕನಿಷ್ಟ 16 ತಾಸುಗಳ ಕಾರ್ಯಭಾರವಿರುವ ಮಂಜೂರಾದ ಖಾಲಿ ಹುದ್ದೆಗಳು) ಹುದ್ದೆಗಳನ್ನು ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಪ್ರದರ್ಶಿಸಲಾಗುವುದು.

2. ಸಿಬ್ಬಂದಿಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಲಯವನ್ನು ಹೊರತುಪಡಿಸಿ ಮುಂದಿನ ವಲಯದಲ್ಲಿ ಹುದ್ದೆಗಳನ್ನು ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗುವುದು. (ಎ ಯಿಂದ ಸಿ, ಸಿ ಯಿಂದ ಬಿ ಮತ್ತು ಬಿ ಯಿಂದ ಎ) ಮುಂದಿನ ವಲಯದಲ್ಲಿ ಹುದ್ದೆಗಳು ಮಂಜೂರಾಗಿಲ್ಲದ ಪಕ್ಷದಲ್ಲಿ ಬಾಕಿಯಿರುವ ವಲಯದಲ್ಲಿ ಹುದ್ದೆ ಮಂಜೂರಾಗಿದ್ದಲ್ಲಿ ಅವಕಾಶ ಕಲ್ಪಿಸಲಾಗುವುದು. ಒಂದುವೇಳೆ ಅಲ್ಲಿಯೂ ಹುದ್ದೆ ಮಂಜೂರಾಗಿರದಿದ್ದಲ್ಲಿ ಮಾತ್ರ ಸಿಬ್ಬಂದಿಗಳು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ವಲಯದಲ್ಲಿಯೇ ಸ್ಥಳ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು. (ಉದಾ: 'ಎ' ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಸಿಬ್ಬಂದಿಯು ನಿಯಮಾನುಸಾರ 'ಸಿ' ವಲಯದ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬೇಕಿರುತ್ತದೆ. ಒಂದು ವೇಳೆ 'ಸಿ' ವಲಯದಲ್ಲಿ ಹುದ್ದೆ ಮಂಜೂರಾಗದಿದ್ದಲ್ಲಿ 'ಬಿ' ವಲಯದಲ್ಲಿನ ಹುದ್ದೆಯ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು. 'ಬಿ' ವಲಯದಲ್ಲಿಯೂ ಹುದ್ದೆ ಮಂಜೂರಾಗದಿದಲ್ಲಿ ಮಾತ್ರ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 'ಎ' ವಲಯದಲ್ಲಿಯೇ ಸ್ಥಳ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು)

--2

3. ಮೊದಲು ಕಡ್ಡಾಯವಾಗಿ ವರ್ಗಾವಣೆಗೊಳ್ಳುತ್ತಿರುವ ಸಿಬ್ಬಂದಿಗಳಿಗೆ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆಗೆ ಅವಕಾಶ ನೀಡಿ ತದ ನಂತರದಲ್ಲಿ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಬೋಧಕ/ಗ್ರಂಥಪಾಲಕರು/ದೈಹಿಕ ಶಿಕ್ಷಣ ಶಿಕ್ಷಕರು/ಬೋಧಕೇತರ ಸಿಬ್ಬಂದಿಗಳಿಗೆ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು. ಕಡ್ಡಾಯವಾಗಿ ವರ್ಗಾಯಿಸುವ ಸಿಬ್ಬಂದಿಗಳು ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳದಿದ್ದ/ಕೌನ್ಸೆಲಿಂಗ್‌ಗೆ ಹಾಜರಾಗದಿದ್ದ ಪಕ್ಷದಲ್ಲಿ ಅವರುಗಳನ್ನು ಸ್ಥಳ ನಿಯುಕ್ತಿಗೊಳಿಸಲು ಆಯುಕ್ತಾಲಯದ ಹಂತದಲ್ಲಿ ಕ್ರಮಕೈಗೊಳ್ಳಲಾಗುವುದು. ಕಡ್ಡಾಯವಾಗಿ ವರ್ಗಾಯಿಸಲಾಗುತ್ತಿರುವ ಸಿಬ್ಬಂದಿಗಳಲ್ಲಿ ಎ ವಲಯದಲ್ಲಿರುವ ಸಿಬ್ಬಂದಿಗಳಿಗೆ ಮೊದಲು ಕೌನ್ಸಿಲಿಂಗ್ ನಡೆಸಿ ತದ ನಂತರದಲ್ಲಿ ಕ್ರಮವಾಗಿ ಬಿ & ಸಿ ವಲಯಗಳ ಸಿಬ್ಬಂದಿಗಳಿಗೆ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು. ಈ ಪ್ರಕಾರವಾಗಿ ಕಡ್ಡಾಯವಾಗಿ ವರ್ಗಾವಣೆ ಮಾಡುವಾಗ ನಿವೃತ್ತಿಗೆ 2 ವರ್ಷಗಳಿರುವ ಸಿಬ್ಬಂದಿಗಳನ್ನು ಅಂದರೆ ದಿನಾಂಕ:31-08-2020ರೊಳಗಾಗಿ ವಯೋ ನಿವೃತ್ತಿ ಹೊಂದುತ್ತಿರುವ ಸಿಬ್ಬಂದಿಗಳನ್ನು ಹೊರತುಪಡಿಸಲಾಗುವುದು.

4. **ಸದರಿ ಕಡ್ಡಾಯ ವರ್ಗಾವಣೆ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧಿನಿಯಮದಲ್ಲಿ ನೀಡಲಾಗಿರುವ ಮಾರ್ಗ ಸೂಚಿಗಳನ್ವಯ ಹಾಗೂ ಅದರಲ್ಲಿ ವಿಧಿಸಲಾಗಿರುವ ಗರಿಷ್ಠ ಮಿತಿಗಳೊಳಪಟ್ಟು ಆದ್ಯತೆ ನೀಡಲಾಗುವುದು.**

5. ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧಿನಿಯಮದಲ್ಲಿ ನೀಡಲಾಗಿರುವ ಮಾರ್ಗ ಸೂಚಿಗಳನ್ವಯ ಹಾಗೂ ಅದರಲ್ಲಿ ವಿಧಿಸಲಾಗಿರುವ ಗರಿಷ್ಠ ಮಿತಿಗಳೊಳಪಟ್ಟು ಆದ್ಯತೆ ನೀಡಲಾಗುವುದು. ಒಂದು ವೇಳೆ ಸಂಬಂಧಿಸಿದ ವಿಶೇಷ ಪ್ರಕರಣಗಳಡಿಯಲ್ಲಿ ಶೇಕಡಾ 01 ಕ್ಕಿಂತ ಕಡಿಮೆ ಅರ್ಹ ಸಿಬ್ಬಂದಿಗಳಿದ್ದಲ್ಲಿ ಕೊರತೆಯಾಗುವ ಸಂಖ್ಯೆಯನ್ನು ವರ್ಗಾವಣೆ ಅಧಿನಿಯಮದನ್ವಯ ಸಾಮಾನ್ಯ ವರ್ಗಾವಣೆಗ ಪರಿಗಣಿಸಲಾಗುವುದು.

6. 2017-18ನೇ ಸಾಲಿನ ಕಡ್ಡಾಯ ವರ್ಗಾವಣೆ ಸಂಬಂಧ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಹೊರತುಪಡಿಸಿ ಸಾಮಾನ್ಯ ವರ್ಗಾವಣೆಯ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗಿರುತ್ತದೆ.

7. ವರ್ಗಾವಣೆ ಅಧಿನಿಯಮದ ನಿಯಮ 7(2)ರನ್ವಯ ಸೇವಾಪೂರ್ವ ಅವಧಿ ಘೋಷಣೆಯಾಗದ ಬೋಧಕ/ ಬೋಧಕೇತರ ಸಿಬ್ಬಂದಿವರ್ಗದವರನ್ನು ವರ್ಗಾವಣೆಗೆ ಪರಿಗಣಿಸುವುದಿಲ್ಲ.

8. ವರ್ಗಾವಣೆ ಅಧಿನಿಯಮದ ನಿಯಮ 7(3)ರನ್ವಯ Project work ಕೈಗೊಂಡಿರುವ ಬೋಧಕರಿಗೆ ಮಾತ್ರ ಅನ್ವಯಿಸುವಂತೆ ಗರಿಷ್ಟ 03 ವರ್ಷಗಳು ಅಥವಾ Project work ಮುಗಿಯುವವರೆವಿಗೆ ಯಾವುದು ಮೊದಲೋ ಅಲ್ಲಿಯವರೆವಿಗೆ ವರ್ಗಾವಣೆಗೆ ಪರಿಗಣಿಸುವುದಿಲ್ಲ.

- ಸಾಮಾನ್ಯ ವರ್ಗಾವಣೆಗೆ ಸಂಬಂಧಿಸಿದಂತೆ ಈ ಸುತ್ತೋಲೆಯೊಂದಿಗೆ ಇಲಾಖೆಯ ಎ, ಬಿ, ಸಿ ವಲಯಗಳಲ್ಲಿನ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಆಯಾ ವಲಯಗಳಲ್ಲಿ ಸತತವಾಗಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ತಯಾರಿಸಲಾಗಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು (ಹೈದ್ರಾಬಾದ್ ಕರ್ನಾಟಕ ಪ್ರದೇಶ ಹಾಗೂ ರಾಜ್ಯದ ಇತರ ಪ್ರದೇಶಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ) ಬೋಧಕ ವರ್ಗದವರಿಗೆ ಸಂಬಂಧಿಸಿದಂತೆ **ಅನುಬಂಧ-ಎ(1 ರಿಂದ 6)ರಲ್ಲಿ** ಗ್ರಂಥಪಾಲಕರಿಗೆ ಸಂಬಂಧಿಸಿದಂತೆ **ಅನುಬಂಧ-ಬಿ(1 ರಿಂದ 6) ರಲ್ಲಿ** ದೈಹಿಕ ಶಿಕ್ಷಣ ನಿರ್ದೇಶಕರಿಗೆ ಸಂಬಂಧಿಸಿದಂತೆ **ಅನುಬಂಧ-ಸಿ(1 ರಿಂದ 6)ರಲ್ಲಿ** ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ **ಅನುಬಂಧ-ಡಿ (1 ರಿಂದ 6)** ರಲ್ಲಿ ಪ್ರಕಟಿಸಲಾಗಿದೆ. ಸದರಿ ಪಟ್ಟಿಯನ್ನು ಪರಿಶೀಲಿಸಿ ದಿನಾಂಕ:04-09-2018ರೊಳಗೆ ನ್ಯೂನತೆಗಳನ್ನು ಇಎಂಐಎಸ್ ನಲ್ಲಿ ಸಿಬ್ಬಂದಿ Profile ನಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಕಾಲೇಜಿನ ಹಂತದಲ್ಲಿಯೇ ಸರಿಪಡಿಸಿಕೊಳ್ಳತಕ್ಕದ್ದು.

- ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಸ್ವೀಕರಿಸಲಾದ ವರ್ಗಾವಣೆ ಅರ್ಜಿಗಳಲ್ಲಿ ಅರ್ಹರಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು (ಹೈದ್ರಾಬಾದ್ ಕರ್ನಾಟಕ ಪ್ರದೇಶ ಹಾಗೂ ರಾಜ್ಯದ ಇತರ ಪ್ರದೇಶಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ) ಬೋಧಕ ವರ್ಗದವರಿಗೆ ಸಂಬಂಧಿಸಿದಂತೆ **ಅನುಬಂಧ-ಇ (1 ರಿಂದ 7)ರಲ್ಲಿ**, ಗ್ರಂಥಪಾಲಕರಿಗೆ ಸಂಬಂಧಿಸಿದಂತೆ **ಅನುಬಂಧ-ಎಫ್(1, 2, 3)ರಲ್ಲಿ** ದೈಹಿಕ ಶಿಕ್ಷಣ ನಿರ್ದೇಶಕರಿಗೆ ಸಂಬಂಧಿಸಿದಂತೆ **ಅನುಬಂಧ-ಜಿ(1, 2)ರಲ್ಲಿ** ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ **ಅನುಬಂಧ-ಹೆಚ್ (1, 2)ರಲ್ಲಿ** ಪ್ರಕಟಿಸಲಾಗಿದೆ. ಸದರಿ ಜೇಷ್ಠತಾ ಪಟ್ಟಿಗಳಿಗೆ ಸಂಬಂಧಿಸಿದಂತೆ ವರ್ಗಾವಣೆ ಅಧಿನಿಯಮಗಳ ನಿಯಮ 11 (3) ರಂತೆ ಅರ್ಹತಾ ಪಟ್ಟಿಗಳನ್ನು ಅಂತರ್‌ಜಾಲದಲ್ಲಿ ಪ್ರಕಟಿಸಿದ 07 ದಿನಗಳೊಳಗಾಗಿ ಇಲ್ಲವೇ ದಿನಾಂಕ:04-09-2018ರ ಸಂಜೆ 5.30 ಗಂಟೆ ಒಳಗಾಗಿ ಸಂಬಂಧಪಟ್ಟ ಸಿಬ್ಬಂದಿಗಳು ತಮ್ಮ ಆಕ್ಷೇಪಣೆಗಳನ್ನು **dce.helpline@gmail.com** ವಿಳಾಸಕ್ಕೆ ರವಾನಿಸುವುದು

ಬೋಧಕರು, ಗ್ರಂಥಪಾಲಕರು, ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ಸಂಬಂಧಿಸಿದಂತೆ, ಹರಪನಹಳ್ಳಿ ತಾಲ್ಲೂಕನ್ನು ದಾವಣಗೆರೆ ಜಿಲ್ಲಾ ವ್ಯಾಪ್ತಿಯಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಬಳ್ಳಾರಿ ಜಿಲ್ಲಾ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ಪ್ರಕ್ರಿಯೆ ಪೂರ್ಣಗೊಂಡಿಲ್ಲವಾದ್ದರಿಂದ ಪ್ರಸ್ತುತ ಹೈ-ಕ ಪ್ರದೇಶದ ಸ್ಥಳೀಯ ವೃಂದಕ್ಕೆ ಸೇರಲಿಚ್ಛಿಸಿರುವ ಸಿಬ್ಬಂದಿಗಳಿಗೆ ಹೈ-ಕ ಪ್ರದೇಶದ 6 ಜಿಲ್ಲೆಗಳಲ್ಲಿ ಹಾಗೂ ರಾಜದಾನಿ ಬೆಂಗಳೂರಿನಲ್ಲಿ ನಿಯಮಾನುಸಾರ ಮೀಸಲಿಟ್ಟಿರುವ ಹುದ್ದೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಮಾತ್ರ ವರ್ಗಾವಣೆಯನ್ನು ಮಾಡಲಾಗುವುದು.

Profile Updation ನಲ್ಲಿ ಯಾವುದೇ ತಪ್ಪುಗಳನ್ನು ಮಾಡಿರುವುದು ಇಲಾಖೆಯ ಗಮನಕ್ಕೆ ಬಂದಲ್ಲಿ ಸಂಬಂಧಿಸಿದ ಪ್ರಾಂಶುಪಾಲರು ಹಾಗೂ ಸಿಬ್ಬಂದಿಗಳನ್ನು ನೇರ ಹೊಣೆಗಾರರನ್ನಾಗಿ ಪರಿಗಣಿಸಿ ಶಿಸ್ತು ಕ್ರಮಕೈಗೊಳ್ಳಲಾಗುವುದು.

ಎ, ಬಿ, ಸಿ ವಲಯಗಳಲ್ಲಿ ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆ ಕಲಾ, ವಾಣಿಜ್ಯ ವಿಷಯಗಳಲ್ಲಿ ಕನಿಷ್ಠ 12 ತಾಸುಗಳು ಹಾಗೂ ಪ್ರಾಯೋಗಿಕ ತರಗತಿಗಳನ್ನೊಳಗೊಂಡ ವಿಷಯಗಳಲ್ಲಿ ಕನಿಷ್ಠ 16 ತಾಸುಗಳ ಕಾರ್ಯಭಾರವಿದ್ದಲ್ಲಿ (ಇಎಂಐಎಸ್ ತಂತ್ರಾಂಶದಲ್ಲಿ ಕಾಲೇಜುಗಳಿಂದ ನಮೂದು ಮಾಡಲಾಗಿರುವಂತೆ) ಅಂತಹ ಹುದ್ದೆಗಳನ್ನು ವರ್ಗಾವಣೆಗೆ ಪರಿಗಣಿಸಲಾಗುವುದು. ಈ ಸಂಬಂಧ ನ್ಯೂನತೆಗಳಿದ್ದಲ್ಲಿ ದಿನಾಂಕ: 04-09-2018ರೊಳಗೆ ಇಎಂಐಎಸ್‌ನಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಕಾಲೇಜಿನ ಹಂತದಲ್ಲಿಯೇ ಸರಿಪಡಿಸಿಕೊಳ್ಳತಕ್ಕದ್ದು.

ಪ್ರಕಟಿಸಲಾದ ಜೇಷ್ಠತಾಪಟ್ಟಿಗಳ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ:04-09-2018 ರೊಳಗೆ ರೊಳಗಾಗಿ **E-mail ID:dce.helpline@gmail.com** ಗೆ ಸ್ಕ್ಯಾನ್ ಮಾಡಲಾದ ದಾಖಲಾತಿಗಳ ಪ್ರತಿಗಳೊಂದಿಗೆ ಸಲ್ಲಿಸತಕ್ಕದ್ದು. ದಿನಾಂಕ:04-09-2018ರಂದು ಇಎಂಐಎಸ್ ನಲ್ಲಿ ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ ಖಾಲಿ ಹುದ್ದೆಗಳ ಪಟ್ಟಿಯನ್ನು ಪ್ರಕಟಿಸಲಾಗುವುದು. ದಿನಾಂಕ:04-09-2018ರ ನಂತರದಲ್ಲಿ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**ಸೂಚನೆ:**

1. **ಇ-ಮೇಲ್ ಮೂಲಕ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ರೀತಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದಲ್ಲಿ ಪರಿಗಣಿಸಲಾಗುವುದಿಲ್ಲ.**

*circular transfer 18-19*

2. ಇಎಂಐಎಸ್ ತಂತ್ರಾಂಶದಲ್ಲಿ ಕಾಲೇಜುಗಳಿಂದ ಅಪ್‌ಲೋಡ್ ಮಾಡಲಾಗಿರುವ ಮಾಹಿತಿ ಆದಾರದ ಮೇರೆಗೆ ವರ್ಗಾವಣೆಗಳನ್ನು ಮಾಡಲಾಗುವುದರಿಂದ ಕಾರ್ಯಭಾರ ಹಾಗೂ ಖಾಲಿಹುದ್ದೆಗಳಿಗೆ ಸಂಬಂಧಿಸಿದಂತೆ ವರ್ಗಾವಣೆ ಸಂಧರ್ಬದಲ್ಲಿ ನ್ಯೂನತೆಗಳು ಕಂಡುಬಂದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಅಂತಿಮ ಜೇಷ್ಠತಾಪಟ್ಟಿ ಹಾಗೂ ಕೌನ್ಸಿಲಿಂಗ್ ದಿನಾಂಕಗಳನ್ನು ನಂತರ ಪ್ರಕಟಿಸಲಾಗುವುದು.

*(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

29/8/18

**ಕಾಲೇಜು ಶಿಕ್ಷಣ ನಿರ್ದೇಶಕರು**

ಇವರಿಗೆ:

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿಗಾಗಿ
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ-ಮಾಹಿತಿಗಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.